**ಕ್ರಿಮಿನಲ್ ಮಿಸಿಲೆನಿಯಸ್ ನಂಃ 948/2023**

ಪಿ ಡಬ್ಲ್ಯೂಃ 01

ಸಾಕ್ಷಿಯು ಪ್ರಮಾಣ ಮಾಡಿದ ದಿನಾಂಕಃ 16.05.2026

**ಪಾಟೀ ಸವಾಲು ಎದುರುದಾರರ ಪರ ವಕೀಲರಿಂದ ಶ್ರೀ ಜಿ ಎಂ ಆರ್ ವಕೀಲರಿಂದ**

1. ಮದುವೆ ಆದ 10 ವರ್ಷಗಳ ಕಾಲ ನಾನು ಹಾಗೂ ಎದುರುದಾರ ನಂ 1 ಚೆನ್ನಾಗಿ ಜೀವನ ಮಾಡಿದ್ದೆವು ಎಂದರೆ ಸರಿ. ನಮಗೆ ಮೂರು ಮಕ್ಕಳು ಆದವು ಎಂದರೆ ಸರಿ. ಮದುವೆ ಆದ ಎಂಟು ವರ್ಷಗಳ ಕಾಲ ಎದುರುದಾರ ನಂ 1 ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. 2021 ರಲ್ಲಿ ನಾನು ಬಟ್ಟೆ ಅಂಗಡಿ ಇಟ್ಟುಕೊಂಡು ಬಟ್ಟೆ ಹೊಲೆಯುವ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಸದರಿ ಅಂಗಡಿ ಇಡಲು ಎದುರುದಾರ ನಂ 1 ಹಣ ಸಹಾಯ ಮಾಡಿದ್ದರು ಎಂದರೆ ಸರಿ. ನನ್ನ ಚಿಕ್ಕಮ್ಮ ಅಗಲೂರು ಗಂಗಮ್ಮರವರನ್ನು ನೋಡಿ ಬಟ್ಟೆ ಅಂಗಡಿ ಇಟ್ಟಿದ್ದೆ ಎಂದರೆ ಸರಿಯಲ್ಲ.

2. ನನಗೆ ಅರ್ದಿಗೇರಿ ರಾಮಕೃಷ್ಣ ಎನ್ನುವವರು ಗೊತ್ತು. ನನ್ನ ಹಾಗೂ ರಾಮಕೃಷ್ಣ ನಡುವೆ ಅಕ್ರಮ ಸಂಬಂಧ ಇತ್ತು ಎಂದರೆ ಸರಿಯಲ್ಲ. 2020 ರಲ್ಲಿ ಅವರು ನನಗೆ ಫೋನ್ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆಗ ನನ್ನ ಗಂಡ ನನ್ನಿಂದ ಫೋನ್ ನ್ನು ಕಿತ್ತುಕೊಂಡಿದ್ದರು ಎಂದರೆ ಸರಿಯಲ್ಲ. ಆ ಬಗ್ಗೆ ನನ್ನ ಗಂಡ ನನ್ನ ತಂದೆ ತಾಯಿ ಕರೆಯಿಸಿ ಪಂಚಾಯತಿ ಮಾಡಿದ್ದರು ಎಂದರೆ ಸರಿಯಲ್ಲ. ನಂತರ ಹಿರಿಯರು ಹೇಳಿದಂತೆ ನಾನು ಹಾಗೂ ಎದುರುದಾರ ನಂ 1 ಅನುಸರಿಸಿಕೊಂಡು ಜೀವನ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಂತರ ನಾನು ಮತ್ತು ನನ್ನ ಗಂಡ ಒಟ್ಟಿಗೆ ಜೀವನ ಮಾಡಿದೆವು ಎಂದರೆ ಸರಿ. ನಾನು ಕರೂರಿನಿಂದ ಅಗಲೂರಿಗೆ ನನ್ನ ಚಿಕ್ಕಮ್ಮನ ಬಳಿ ಹೋಗಿ ಬರುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರ ನಂ 1 ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ.

3. 2021 ರಲ್ಲಿ ಒಂದು ದಿನ ಎದುರುದಾರ ನಂ 1 ನನ್ನನ್ನು ಹಾಗೂ ನನ್ನ ಮಕ್ಕಳನ್ನು ನನ್ನ ಚಿಕ್ಕಮ್ಮನ ಮನೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ನಾನು ನನ್ನ ಗಂಡನನ್ನು ವಾಪಸ್ಸು ಕಳುಹಿಸಿ ಮರುದಿನ ಬರುತ್ತೇನೆ ಎಂದು ಹೇಳಿ ಕಳುಹಿಸಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡ ನನ್ನನ್ನು ಅಗಲೂರಿನಲ್ಲಿ ಬಿಟ್ಟು ವಾಪಸ್ಸು ಕರೂರಿಗೆ ಬಂದನು ಎಂದರೆ ಸರಿಯಲ್ಲ. ಆ ದಿನ ನಾನು ರಾಮಕೃಷ್ಣ ಎನ್ನುವವರ ಜೊತೆ ನನ್ನ ಚಿಕ್ಕಮ್ಮನ ಮನೆಯ ಪಕ್ಕದಲ್ಲಿ ಇದ್ದ ಗೋಡೌನಲ್ಲಿ ಸಮಯ ಕಳೆದೆನು ಎಂದರೆ ಸರಿಯಲ್ಲ. ನಾನು ಮತ್ತು ರಾಮಕೃಷ್ಣ ಒಟ್ಟಿಗೆ ಇದ್ದಾಗ ಎದುರುದಾರ ನಂ 1 ನಮ್ಮನ್ನು ಕಿಟಕಿಯಿಂದ ನೋಡಿದನು ಎಂದರೆ ಸರಿಯಲ್ಲ. ಆಗ ನನ್ನ ಗಂಡನು ಗಲಾಟೆ ಮಾಡಿ ನನ್ನ ಚಿಕ್ಕಪ್ಪ, ಚಿಕ್ಕಮ್ಮ ಹಾಗೂ ಅವರ ಮಗನಿಗೆ ಕರೆದಾಗ ನಾನು ಗೋಡೌನ ಬಾಗಿಲು ತೆರೆದನು ಎಂದರೆ ಸರಿಯಲ್ಲ. ಆಗ ಎದುರುದಾರ ನಂ 1 ರವರು ರಾಮಕೃಷ್ಣನಿಗೆ ಹೊಡೆಯಲು ಹೋದಾಗ ನಾನು ಎದುರುದಾರ ನಂ 1 ರವರ ಕೈಯನ್ನು ಹಿಡಿದುಕೊಂಡಿದ್ದೆನು ಎಂದರೆ ಸರಿಯಲ್ಲ. ಆಗ ರಾಮಕೃಷ್ಣ ತಪ್ಪಿಸಿಕೊಂಡು ಓಡಿ ಹೋದ ಎಂದರೆ ಸರಿಯಲ್ಲ. ಆ ದಿನ ಎದುರುದಾರ ನಂ 1 ನನ್ನ ಮಕ್ಕಳನ್ನು ಕರೆದುಕೊಂಡು ಕರೂರಿಗೆ ಬಂದನು ಎಂದರೆ ಸರಿಯಲ್ಲ.

4. ನಂತರ ನನ್ನ ಚಿಕ್ಕಪ್ಪ ಹಾಗೂ ಚಿಕ್ಕಮ್ಮ ನನಗೆ ಹೊಡೆದು ನನಗೆ ಪ್ರಜ್ಞೆ ತಪ್ಪಿತ್ತು ಎಂದರೆ ಸರಿಯಲ್ಲ. ನನ್ನ ತಮ್ಮ ಮಹೇಂದ್ರ ನನ್ನನ್ನು ರಾಃ 02.00 ಗಂಟೆಗೆ ಕರೂರಿಗೆ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ. ಆಗ ಎದುರುದಾರ ನಂ 1 ರವರು ನನ್ನನ್ನು ಮನೆಯ ಒಳಗೆ ಸೇರಿಸದೆ ಇದ್ದಾಗ ನಾನು ಒಂದು ತಾಸು ಮನೆಯ ಹೊರಗೆ ಇದ್ದೆನು ಎಂದರೆ ಸರಿಯಲ್ಲ. ನಂತರ ನನ್ನ ಇನ್ನೊಬ್ಬ ಚಿಕ್ಕಪ್ಪ ನಿಂಗಪ್ಪ ಎನ್ನುವವರು ಎದುರುದಾರ ನಂ 1 ರವರಿಗೆ ಫೋನ್ ಮಾಡಿದಾಗ ಎದುರುದಾರ ನಂ 1 ನನ್ನನ್ನು ಮನೆಯೊಳಗೆ ಕರೆದುಕೊಂಡನು ಎಂದರೆ ಸರಿಯಲ್ಲ. ನಂತರ ಮರುದಿನ ಪಂಚಾತಿಯ ಆಯಿತು ಎಂದರೆ ಸರಿಯಲ್ಲ. ನಂತರ ನನ್ನನ್ನು ನನ್ನ ತಂದೆ ತಾಯಿ ನನ್ನ ತವರು ಮನೆಗೆ

ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ನಂತರ ನಾನು ನಿದ್ದೆ ಮಾತ್ರೆ ಸೇವಿಸಿ ಆಸ್ಪತ್ರೆಗೆ ದಾಖಲು ಆಗಿದ್ದೆ ಎಂದರೆ ಸರಿಯಲ್ಲ.

5. 2021 ರಲ್ಲಿ ನನ್ನ ತಾಯಿ ಎದುರುದಾರ ನಂ 1 ವಿರುದ್ಧ ಸುಳ್ಳು ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ನಾನು ನನ್ನ ತವರು ಮನೆಗೆ ಹೋದೆನು ಎಂದರೆ ಸರಿಯಲ್ಲ. ನಂತರ ಪಂಚಾಯತಿ ಆದಾಗ ಸುಳ್ಳು ಪ್ರಕರಣ ವಾಪಸ್ಸು ಪಡೆದರೆ ಎದುರುದಾರ ನಂ 1 ನನ್ನನ್ನು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನನ್ನನ್ನು ಎದುರುದಾರ ನಂ 1 ರವರು ತನ್ನ ಮನೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಆಗ ನಾನು ಎದುರುದಾರ ನಂ 1 ರವರಿಗೆ ಊಟ ಹಾಕದೆ, ಉಪಚಾರ ಮಾಡದೆ ಆತನಿಗೆ ಕಿರುಕುಳ ಕೊಟ್ಟೆನು ಎಂದರೆ ಸರಿಯಲ್ಲ. ಸಂಸಾರ ಚೆನ್ನಾಗಿ ಮಾಡಲು ಎದುರುದಾರ ನಂ 1 ರವರು ತನ್ನ ತಾಯಿಯನ್ನು ವಿರೂಪಾಪುರ ಗ್ರಾಮಕ್ಕೆ ಕಳುಹಿಸಿದರು ಎಂದರೆ ಸರಿಯಲ್ಲ. ಆದರೂ ಸಹ ನಾನು ಎದುರುದಾರ ನಂ 1 ರವರನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ಎದುರುದಾರ ನಂ 1 ರವರು ತನ್ನ ಸಂಸಾರ ಹಾಳಾಯಿತು ಎಂಬ ಕಾರಣಕ್ಕೆ ವಿಷ ಸೇವಿಸಿ ಆಸ್ಪತ್ರೆಗೆ ದಾಖಲು ಆಗಿದ್ದರು ಎಂದರೆ ಗೊತ್ತಿಲ್ಲ. ಆಗ ನಾನು ಎದುರುದಾರ ನಂ 1 ರವರನ್ನು ಆಸ್ಪತ್ರೆಯಲ್ಲಿ ಭೇಟಿ ಆಗಿದ್ದೆ ಎಂದರೆ ಸರಿಯಲ್ಲ. ಎದುರುದಾರ ನಂ 1 ರವರಿಗೆ ನಾನೇ ಕಿರುಕುಳ ಕೊಟ್ಟು ಅವರ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿದ್ದೆನೆ ಎಂದರೆ ಸರಿಯಲ್ಲ. ಎದುರುದಾರ ನಂ 1 ನನ್ನನ್ನು ಹಾಗೂ ನನ್ನ ಮಕ್ಕಳನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

6. ಎದುರುದಾರ ನಂ 1 ರವರಿಗೆ ಮದುವೆ ಸಮಯದಲ್ಲಿ ಯಾವುದೇ ಬಂಗಾರ, ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಇರುವುದಿಲ್ಲ. ಎದುರುದಾರ ನಂ 1 ರವರು ನನಗೆ ಹೊಡೆ ಬಡೆ ಮಾಡಿದ ಬಗ್ಗೆ ನಾನು ಖುದ್ದಾಗಿ ದೂರು ದಾಖಲು ಮಾಡಿಲ್ಲ. ಆ ಬಗ್ಗೆ ಪಂಚಾಯತಿಗಳು

ಆಗಿದ್ದವು. ಎದುರುದಾರ ನಂ 1 ನನಗೆ ಹೊಡೆದು ಗಾಯ ಗೊಳಿಸಿದ ಬಗ್ಗೆ ಯಾವುದೇ ಗಾಯದ ಪ್ರಮಾಣ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಎದುರುದಾರ ನಂ 1 ಅಥವಾ ಆತನ ಮನೆಯವರು ನನಗೆ ಹೊಡೆಬಡೆ ಮಾಡಿಲ್ಲ ಎಂದರೆ ಸರಿಯಲ್ಲ.

7. ಎದುರುದಾರ ನಂ 1 ರವರ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ಅವರ ತಂದೆ ತಾಯಿ ಹೆಸರಿನಲ್ಲಿ ಇದೆ. ಎದುರುದಾರ ನಂ 1 ರವರಿಗೆ ತಿಂಗಳಿಗೆ ಒಂದು ಲಕ್ಷ ಆದಾಯ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರಾಮಕೃಷ್ಣ ಎಂಬುವವರ ಜೊತೆ ಅಕ್ರಮ ಸಂಬಂಧ ಹೊಂದಿರುವ ಕಾರಣ ಅರ್ಜಿಯಲ್ಲಿ ಕೇಳಿರುವ ಯಾವುದೇ ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಅಥವಾ ಆತನ ಮನೆಯವರು ಯಾವುದೇ ಕೌಟುಂಬಿಕ ದೌರ್ಜನ್ಯ ನಡೆಸಿಲ್ಲ ಎಂದರೆ ಸರಿಯಲ್ಲ. ನಾನು ಸಂಪಾದನೆ ಮಾಡಲು ಶಕ್ತಳಾಗಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಜೀವನಾಂಶಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ. ಎದುರುದಾರ ನಂ 1 ನನ್ನ ವಿರುದ್ಧ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ನಾನು ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**